**<u>ದಿನಾಂಕಃ 21.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ವಾದಿ ಪರ ಶ್ರೀ ಪಿ.ಎಲ್.ಎನ್. ವಕೀಲರಿಂದಃ</u>**

1) ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ವಾದಿ ಗೌರಮ್ಮನ ಪರಿಚಯ ಇದೆ. ಆಕೆಯ ಮಗ ರಂಗಸ್ವಾಮಿಯ ಪರಿಚಯ ಸಹ ಇದೆ. ವಾದಿ ದಾವಾ ಸ್ವತ್ತು ತನಗೆ ಸೇರಿದ್ದು ಎಂದು ಹೇಳಿ ಹಾಗೂ ನಾನು ಆಕೆಯ ಸ್ವತ್ತಿಗೆ ಪ್ರವೇಶ ಮಾಡಲು ಪ್ರಯತ್ನ ಮಾಡುತ್ತಿರುವುದಾಗಿ ಹೇಳಿ ಈ ದಾವೆಯನ್ನು ಹೂಡಿರುತ್ತಾರೆ. ನಮ್ಮ ಮನೆಯ ಪಶ್ಚಿಮ ದಿಕ್ಕಿಗೆ ದಾವಾ ಸ್ವತ್ತು ಇದೆ ಎಂದರೆ ಸರಿ. ನಮ್ಮ ಮನೆಯ ಸರ್ವೆ ನಂ.18/1. ವಾದಿ ಮನೆಯ ಸರ್ವೆ ನಂಬರ್ 18/3. ವಾದಿ ಮನೆಯ ಖಾತಾ ಸಂಖ್ಯೆ 18/11 ಎಂದರೆ ಸಾಕ್ಷಿಯು ಆ ಬಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2) ನಾನು ಚಿಕ್ಕ ವಯಸ್ಸಿನಲ್ಲಿ ಇರುವಾಗಿನಿಂದಲೂ ವಾದಿಯು ನಮ್ಮ ಮನೆಯ ಪಕ್ಕದಲ್ಲಿ ಇರುತ್ತಾರೆ. ವಾದಿ ಆ ಸ್ವತ್ತನ್ನು ಯಾರಿಂದ ಖರೀದಿ ಮಾಡಿರುತ್ತಾರೆಎಂದು ನನಗೆ ಗೊತ್ತಿಲ್ಲ. ವಾದಿ ದಿಃ 09.01.1985 ರಂದು ದಾವಾ ಸ್ವತ್ತನ್ನು ಜಯರತ್ನಮ್ಮ ರವರಿಂದ ಖರೀದಿ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆ ರೀತಿ ಖರೀದಿ ಮಾಡಿದ ನಂತರ ವಾದಿಯ ಹೆಸರಿಗೆ ದಾವಾ ಸ್ವತ್ತಿನ ಖಾತೆಯು ಪಂಚಾಯಿತಿಯಲ್ಲಿ ದಾಖಲಾಗಿದೆ ಎಂದರೆ ಸರಿ. ಈಗಲೂ ಸಹ ವಾದಿಯ ಹೆಸರಿನಲ್ಲಿಯೇ ದಾವ ಸ್ವತ್ತಿನ ಖಾತೆಯು ಬರುತ್ತಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೂರ್ವ ದಿಕ್ಕಿನಲ್ಲಿ ನಮಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇರದೆ ಇದ್ದರೂ ಸಹ ವಾದಿಯ ಸ್ವಾಧೀನಕ್ಕೆ ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದು ಅವರ ಸ್ವಾಧೀನಕ್ಕೆ ನಾನು ತೊಂದರೆ ಕೊಟ್ಟಿರುತ್ತೇನೆಯೇ ಹೊರತು ಅವರು ನನ್ನ ಸ್ವತ್ತಿನ ಸ್ವಾಧೀನಕ್ಕೆ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

3) ವಾದಿ ತನ್ನ ಮನೆಗೆ ನೀರಿನ ಸಂಪರ್ಕವನ್ನು ಈ ಪ್ರಕರಣ ದಾಖಲಾದ ನಂತರ ಪಡೆದುಕೊಂಡಿರುತ್ತಾರೆ. ವಾದಿ ದಾವಾ ಸ್ವತ್ತಿನ ಮಾಲೀಕರಾಗಿದ್ದು ಆಕೆ ಆ ಸ್ವತ್ತಿನಲ್ಲಿ ಸ್ವಾಧೀನ ಹೊಂದಿದ್ದು ಆ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಬಾಧ್ಯತೆಗಳು

ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ತನ್ನ ಮನೆಯ ದಾಖಲೆಯಲ್ಲಿ ತನ್ನ ಮನೆಯ ಪಶ್ಚಿಮ ದಿಕ್ಕಿಗೆ ರಸ್ತೆ ಇರುವುದಾಗಿ ನಡಿಯುತ್ತಾರೆ. ಈ ಎಲ್ಲಾ ವಿಚಾರಗಳನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಮತ್ತು ಪ್ರತಿವಾದ ಪತ್ರದಲ್ಲಿ ತಿಳಿಸಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ತಯಾರಿಸಲು ಮಾಹಿತಿ ನಾನೇ ನೀಡಿರುತ್ತೇನೆ.

4) ನನ್ನ ಮನೆಯ ಪಶ್ಚಿಮ ದಿಕ್ಕಿಗೆ ಸರ್ಕಾರ ರಸ್ತೆ ಇರುವುದಾಗಿ ತಹಶೀಲ್ದಾರ್ ಮತ್ತು ಪಂಚಾಯಿತಿಗೆ ಹಾಗೂ ಲೋಕಾಯುಕ್ತರವರಿಗೆ ಅರ್ಜಿಯನ್ನು ನೀಡಿದ್ದೇನೆ. ಸದರಿಯವರ ಮುಂದೆ ನಾನು ಪ್ರಕರಣವನ್ನು ದಾಖಲಿಸಿಲ್ಲ. ಭೂ ಕಬಳಿಕೆ ಸಂಬಂಧ ತಹಶೀಲ್ದಾರ್ ರವರು ವಾದಿಯ ಮಗನ ವಿರುದ್ಧ ದಾವೆ ಹೂಡಿರುತ್ತಾರೆ. ಸದರಿ ಪ್ರಕರಣದ ನೊಂದಣಿ ಸಂಖ್ಯೆ ನನಗೆ ಗೊತ್ತಿದೆ. ದಾವಾ ಸ್ವತ್ತಿನ ಪೂರ್ವದಿಕ್ಕಿನಲ್ಲಿ ನಾನು ಅತಿಕ್ರಮ ಪ್ರವೇಶ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ನನ್ನಿಂದ ತೊಂದರೆ ಆಗಿದೆಯೇ ಹೊರತು ಅವರಿಂದ ನನಗೆ ತೊಂದರೆ ಆಗಿಲ್ಲ ಎಂದರೆ ಸರಿಯಲ್ಲ. ತಹಶೀಲ್ದಾರ್ ಮತ್ತು ಪಂಚಾಯಿತಿಗೆ ಹಾಗೂ ಲೋಕಾಯುಕ್ತರವರಿಗೆ ಸುಳ್ಳು ಅರ್ಜಿಗಳನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಇಲಾಖಾ ಅಧಿಕಾರಿಗಳು ಸ್ವಇಚ್ಚೆಯಿಂದ ಪ್ರಕರಣ ದಾಖಲಿಸಿರುವುದಿಲ್ಲ ಮತ್ತು ನಾನು ವಾದಿಗೆ ತೊಂದರೆ ಕೊಡಲು ಅವರ ಮೂಲಕ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ರಾಜಕೀಯ ದುರುದ್ದೇಶದ ಕಾರಣ ನಾನು ವಾದಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚಾಯಿತಿ ವತಿಯಿಂದ ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಡ್ರೈನೇಜ್ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಇತ್ತೀಚೆಗೆ ಮಾಡಿರುವುದಾಗಿ ನುಡಿಯುತ್ತಾರೆ. ಸತ್ಯಾಂಶಗಳು ತಿಳಿದಿದ್ದರೂ ಸಹ ವಾದಿಗೆ ತೊದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**